

بسم اللہ الرّحمٰن الرّحیم

# ಯು.ಕೆ. ಜಲ್ಸ ಸಾಲಾನ 2014: ಅಲ್ಲಾಹನಿಂದ ಲಭಿಸಿದ ಅನುಗ್ರಹಗಳ ಸ್ಮರಣೆ

(ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಪಂಚಮ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಲಂಡನ್‌ನ **'ಬೈತುಲ್ ಫುತೂಹ್'** ಮಸೀದಿಯಲ್ಲಿ **05-09-2014** ರಂದು ನೀಡಿದ **ಜುಮುಅ ಖುತುಬದ ಸಾರಾಂಶ**)

ತಶಹ್ಹುದ್, ತಅವ್ವುಝ್, ಸೂರತುಲ್ ಫಾತಿಹಾ ತಿಲಾವತ್ ಮಾಡಿದ ನಂತರ ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್ ಅಯ್ಯದಹುಲ್ಲಾಹು ತಆಲಾ ಬಿನಸ್‌ರಿಹಿಲ್ ಅಝೀಝ್ ಹೀಗೆ ಹೇಳಿದರು:

**ಅಲ್‌ಹಮ್‌ದುಲಿಲ್ಲಾಹ್–** ಸಕಲ ಸ್ತುತಿಗಳು ಅಲ್ಲಾಹನಿಗೆ ಸಲ್ಲುವುವು. ಕಳೆದ ವಾರ ಯು.ಕೆ. ಜಲ್ಸ ಸಾಲಾನ ಜರಗಿತು. ಅಲ್ಲಾಹನ ಅನುಗ್ರಹದಿಂದ ಈ ಜಲ್ಸ ನಮಗೆ ಒಳಿತುಗಳನ್ನು ನೀಡಿತು. ಈ ಜಲ್ಸದಲ್ಲಿ ಭಾಗವಹಿಸಿದವರು ಮತ್ತು ಲೋಕದಲ್ಲಿ ವಿವಿಧ ಸ್ಥಳಗಳಲ್ಲಿ ಕುಳಿತುಕೊಂಡು ಅದನ್ನು ವೀಕ್ಷಿಸಿದವರು ಅದರ ಅನುಗ್ರಹದಲ್ಲಿ ಪಾಲುಗಾರರಾದರು. ನನ್ನನ್ನು ಭೇಟಿಯಾದ ಪ್ರತಿಯೊಬ್ಬನು ಮತ್ತು ನನಗೆ ಪತ್ರ ಬರೆದ ಅಸಂಖ್ಯಾತ ಜನರು ತಮ್ಮ ಅಭಿಪ್ರಾಯ ಪ್ರಕಟಪಡಿಸಿದ್ದಾರೆ. ಪ್ರತಿಯೊಂದು ವಿಷಯದಲ್ಲಿಯೂ ಬಹಳ ಉತ್ತಮವಾದ ವ್ಯವಸ್ಥೆ ಮಾಡಲಾಗಿತ್ತು. ಭಾಷಣಗಾರರು ಬಹಳ ಉತ್ತಮ ರೀತಿಯಲ್ಲಿ ಭಾಷಣಗಳನ್ನು ಸಿದ್ಧಪಡಿಸಿದ್ದರು. ಭಾಷಣಗಳು ಜ್ಞಾನವರ್ಧಕವೂ ಆಧ್ಯಾತ್ಮಿಕ ಪ್ರಗತಿಗೆ ಸಹಾಯಕವೂ ಆಗಿದ್ದುವು ಎಂದು ಅವರೆಲ್ಲಾ ಅಭಿಪ್ರಾಯ ಸೂಚಿಸಿದ್ದಾರೆ.

ಜಲ್ಸ ಸಮಾಪನೆಗೊಂಡ ನಂತರದ ಖುತುಬದಲ್ಲಿ ಸಾಮಾನ್ಯವಾಗಿ ನಾನು ಜಲ್ಸದ ಕಾಲದಲ್ಲಿ ಅಲ್ಲಾಹನಿಂದ ಅವತೀರ್ಣಗೊಂಡ ಅನುಗ್ರಹಗಳ ಬಗ್ಗೆ ಮತ್ತು ಅವನ ಸಹಾಯಗಳ ಬಗ್ಗೆ ಪ್ರಸ್ತಾಪಿಸುತ್ತೇನೆ. ಅತಿಥಿಗಳಾಗಿ ಬಂದವರ ಅಭಿಪ್ರಾಯಗಳನ್ನೂ ನಾನು ವಿವರಿಸುತ್ತೇನೆ. ಇದೇ ರೀತಿ ನಾನು ಜಲ್ಸದ ಕಾರ್ಯಕರ್ತರಿಗೆ ಕೃತಜ್ಞತೆ ಅರ್ಪಿಸುತ್ತೇನೆ. ಜಲ್ಸದ ವ್ಯವಸ್ಥೆಯಲ್ಲಿ ಸಂಭವಿಸಿದ ಕೆಲವು ಕುಂದು ಕೊರತೆಗಳನ್ನೂ ಸಹ ಪ್ರಸ್ತಾಪಿಸುತ್ತೇನೆ. ಆದುದರಿಂದ ನಾನು ಈ ದಿನದ ಖುತುಬದಲ್ಲಿ ಇವುಗಳ ಬಗ್ಗೆಯೇ ವಿವರಿಸುವೆನು.

ಜಲ್ಸದ ಪರಿಸರ ಹೇಗಿರುತ್ತದೆ ಎಂದರೆ ಪ್ರತಿಯೊಬ್ಬ ಸಾತ್ವಿಕನ ಮೇಲೆ ಅದು ಒಳ್ಳೆಯ ಪ್ರಭಾವ ಉಂಟು ಮಾಡುತ್ತದೆ. ನಮ್ಮ ಜಮಾಅತಿಗೆ ಸೇರಿಲ್ಲದ ಕೆಲವು ಮುಸ್ಲಿಮರು ಮತ್ತು ಮುಸ್ಲಿಮೇತರರು ಜಲ್ಸದಲ್ಲಿ ಬಂದು ಸೇರುವುದು ಏಕೆಂದರೆ ಅವರೊಂದಿಗೆ ಸ್ನೇಹ ಸಂಬಂಧ ಹೊಂದಿರುವ ಅಹ್ಮದಿಯರು ಜಲ್ಸದ ಅನುಗ್ರಹಗಳ ಬಗ್ಗೆ ನೀಡುವ ವಿವರಣೆಗಳು ಎಷ್ಟರ ಮಟ್ಟಿಗೆ ಸರಿಯಾಗಿವೆ ಎಂಬುದನ್ನು ಕಂಡು ಕೊಳ್ಳಲಿಕ್ಕಾಗಿದೆ. ಜಲ್ಸಕ್ಕೆ ಆಗಮಿಸಿದ ಅಹ್ಮದಿಯೇತರರಲ್ಲಿ ಬಹುತೇಕ ಜನರು ಹೀಗೆ ಹೇಳುತ್ತಾರೆ: ಜಲ್ಸದ ಬಗ್ಗೆ ನಮ್ಮೊಂದಿಗೆ ನಮ್ಮ ಅಹ್ಮದಿ ಸ್ನೇಹಿತರು ಏನು ಹೇಳಿದ್ದರೋ ಅದಕ್ಕಿಂತ ಹೆಚ್ಚು ಉತ್ತಮವಾಗಿ ನಾವು ಜಲ್ಸವನ್ನು ಕಂಡೆವು ಎಂದು. ಕೆಲವರು ಜಲ್ಸದಿಂದ ಎಷ್ಟು ಪ್ರಭಾವಿತರಾಗುತ್ತಾರೆಂದರೆ ಅವರು ಜಲ್ಸದಲ್ಲಿ ಬೈಅತ್ ಮಾಡಿ ಹಿಂದಿರುಗುತ್ತಾರೆ. ಜಲ್ಸಕ್ಕೆ ಆಗಮಿಸಿದವರ ಅಭಿಪ್ರಾಯಗಳನ್ನು ನಾನು ವಿವರಿಸುವೆನು. ಆದರೆ ಅದಕ್ಕಿಂತ ಮೊದಲು ಬೈಅತ್ ಮಾಡಿದ ಕೆಲವರ ಅಭಿಪ್ರಾಯಗಳನ್ನು ಪ್ರಸ್ತಾಪಿಸುವೆನು. ಅವರು ಜಲ್ಸದ ಸಂದರ್ಭದಲ್ಲಿ ಬೈಅತ್ ಮಾಡಿರಲಿಲ್ಲ. ಆದರೆ ನಿನ್ನೆ ಬೈಅತ್ ಮಾಡಿದರು. ಅವರ ಪೈಕಿ ಒಬ್ಬರು ಗ್ವಾಟೇಮಾಲ ದೇಶದ ನಿವಾಸಿಯಾಗಿದ್ದು ವ್ಯಾಪಾರಕ್ಕೋಸ್ಕರ ಜೋರ್ಡಾನ್‌ನಲ್ಲಿ ಈಗ ವಾಸಿಸುತ್ತಿದ್ದಾರೆ. ಸಮೀಅ್ ಖಾದಿರ್ ಎಂದು ಅವರ ಹೆಸರು. ಅವರು ಹೇಳುತ್ತಾರೆ: ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿವಸಲ್ಲಮರು ನಮ್ಮಲ್ಲಿ ಉಂಟು ಮಾಡಲು ಬಯಸುತ್ತಿದ್ದಂತಹ ಭ್ರಾತೃಭಾವನೆ ಮತ್ತು ಪ್ರೀತಿಯ ಕರ್ಮರೂಪವನ್ನು ನಾನು ಜಲ್ಸದ ಸಂದರ್ಭದಲ್ಲಿ ಕಂಡೆನು. ಜಲ್ಸದ ಅತ್ಯುತ್ತಮ ವ್ಯವಸ್ಥೆ, ಜನರ ಪ್ರೀತಿ ವಿಶ್ವಾಸಗಳು ಮತ್ತು ಪರಸ್ಪರ ಸಹಾನುಭೂತಿ ಮತ್ತು ಬಂಧುಭಾವನೆ ನನ್ನನ್ನು ಬಹಳ ಪ್ರಭಾವಿಸಿತು. ಸತ್ಯವಿಶ್ವಾಸಿಗಳು ಒಂದು ಶರೀರದ ಹಾಗೆ ಇರುತ್ತಾರೆಂದೂ ಶರೀರದ ಒಂದು ಭಾಗಕ್ಕೆ ನೋವು ಉಂಟಾಗುವಾಗ ಪೂರ್ಣ ಶರೀರ ನೋವನ್ನು ಅನುಭವಿಸುತ್ತದೆ ಎಂದೂ ವಿವರಿಸಲಾದ ಹದೀಸಿನ ಕೃತಿರೂಪದ ಚಿತ್ರವನ್ನು ನಾನು ಜಲ್ಸದಲ್ಲಿ ಕಂಡೆನು. ಈ ಜಲ್ಸದ ವ್ಯವಸ್ಥೆಯಲ್ಲಿ ಕಾರ್ಯ ನಿರ್ವಹಿಸಿದ ಕಾರ್ಯಕರ್ತರಿಗೆ ಅಲ್ಲಾಹನು ಉತ್ತಮ ಪ್ರತಿಫಲ ನೀಡಲಿ ಎಂದೂ ಅವರು ಹೇಳಿದರು.

ಕೋಸ್ಟಾರೀಕ ದೇಶದಿಂದ ಆಗಮಿಸಿದ ಪ್ರತಿನಿಧಿ ಸಂಘದಲ್ಲಿದ್ದ ಹೈದರ್ ಸಬೀಲಿಯಾ ಎಂಬವರು ಹೀಗೆ ಹೇಳುತ್ತಾರೆ: ಅಹ್ಮದಿಯಾ ಜಮಾಅತಿನ ಅತ್ಯುತ್ತಮವಾದ ವ್ಯವಸ್ಥೆಯಿಂದ ನಾನು ಬಹಳಷ್ಟು ಪ್ರಭಾವಿತನಾಗಿದ್ದೇನೆ. ಜಮಾಅತಿನ ಪ್ರತಿಯೊಬ್ಬ ವ್ಯಕ್ತಿ ತನಗೆ ವಹಿಸಿ ಕೊಡಲಾದ ಕರ್ತವ್ಯವನ್ನು ನಿಷ್ಠೆಯಿಂದ ಈಡೇರಿಸುವುದನ್ನು ಕಂಡು ನಾನು ಅತ್ಯಂತ ಹೆಚ್ಚು ಪ್ರಭಾವಿತನಾದೆನು. ವಿವಿಧ ದೇಶಗಳಿಂದ ಆಗಮಿಸಿದವರೊಂದಿಗೆ ಮಾತನಾಡಿ ನಾನು ಬಹಳ ಸಂತೋಷಗೊಂಡೆನು. ಜಲ್ಸದಲ್ಲಿ ಭಾಗವಹಿಸಿದಾಗ ನೈಜ ಇಸ್ಲಾಮಿನ ಬಗ್ಗೆ ನನ್ನ ಶ್ರದ್ಧೆ ವರ್ಧಿಸಿತು ಮತ್ತು ನನ್ನ ವಿಶ್ವಾಸವೂ ನಿಷ್ಠೆಯೂ ಹೆಚ್ಚಾಯಿತು. ಖಲೀಫರ ಖುತುಬಗಳು ಮತ್ತು ಉಪದೇಶಗಳು ಶಿಯಾ ಸುನ್ನೀ ವ್ಯತ್ಯಾಸವಿಲ್ಲದೆ ಎಲ್ಲಾ ಮುಸ್ಲಿಮರಿಗೂ ಲಾಭದಾಯಕವಾಗಿವೆ ಎಂಬುದು ನನ್ನ ಅಭಿಪ್ರಾಯವಾಗಿದೆ ಎಂದು ಹೇಳಿದರು.

ಕೋಸ್ಟರೀಕದ ಒಬ್ಬ ಮಹಿಳೆ ಡಯಾನ ನಯೀಮ ಸಾಹಿಬ ಹೀಗೆ ಹೇಳಿದರು: ಜಲ್ಸದಲ್ಲಿ ಭಾಗವಹಿಸಿದುದು ಅತ್ಯಪೂರ್ವ ಅನುಭವವಾಗಿದೆ. ವಿವಿಧ ದೇಶಗಳಿಂದ ಆಗಮಿಸಿದ ವಿವಿಧ ಜನಾಂಗಗಳ ಜನರ ಪರಸ್ಪರ ಪ್ರೀತಿ ವಿಶ್ವಾಸಗಳು ನನ್ನ ಮೇಲೆ ಬಹಳ ಪ್ರಭಾವ ಉಂಟುಮಾಡಿತು. ಇಲ್ಲಿನ ಪರಿಸರವನ್ನು ನೋಡಿದಾಗ ಅದು ನನಗೆ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿವಸಲ್ಲಮರ ಕಾಲಘಟ್ಟದ ನೆನಪನ್ನು ಹುಟ್ಟಿಸಿತು. ಅಹ್ಮದಿಯಾ ಜಮಾಅತ್ ಅಭಿವೃದ್ಧಿ ಹೊಂದುವುದೆಂದು ನನಗೆ ದೃಢ ನಂಬಿಕೆ ಇದೆ. ಅದರ ಮೂಲಕ ಇಸ್ಲಾಮ್ ಧರ್ಮದ ಸ್ನೇಹಭರಿತ ಸಂದೇಶ ಲೋಕದಲ್ಲಿ ಹರಡುತ್ತಾ ಹೋಗುವುದು ಎಂದೂ ಅವರು ಹೇಳಿದರು. ಅಹ್ಮದಿಯಾ ಜಮಾಅತ್ ಇಸ್ಲಾಮ್ ಧರ್ಮದ ಸುಂದರ

ಸಂದೇಶವನ್ನು ನೀಡಿ ಎಲ್ಲರನ್ನೂ ಒಗ್ಗೂಡಿಸಲು ಪ್ರಯತ್ನ ಮಾಡುತ್ತಾ ಇದೆ. ಅನ್ಯರನ್ನು ನಿಂದಿಸದೆ ಅನ್ಯರ ಮೇಲೆ ಕೆಸರೆರಚದೆ ಈ ಕೆಲಸ ಮಾಡುತ್ತದೆ. ಇಲ್ಲಿ ಕಾಣುವ ಪ್ರೀತಿಯ ದೃಶ್ಯಗಳನ್ನು ಎಲ್ಲರೂ ನೋಡುತ್ತಿದ್ದಾರೆ. ಇಲ್ಲಿನ ದೃಶ್ಯಗಳನ್ನು ಕಂಡು ಈ ಪರಸ್ಪರ ಸ್ನೇಹ ಸಂಬಂಧಗಳನ್ನು ವೀಕ್ಷಿಸಿ ಇದರ ಭಾಗವಾಗಲು, ನೈಜ ಇಸ್ಲಾಮಿನ ಭಾಗವಾಗಲು ಪ್ರತಿಯೊಬ್ಬರೂ ಆಗ್ರಹಪಡುತ್ತಾರೆ. ಅಥವಾ ಇಸ್ಲಾಮ್ ಧರ್ಮದ ಮೇಲೆ ದೋಷಾರೋಪ ಮಾಡುವವರು ಇಲ್ಲಿಗೆ ಬಂದು ನೋಡಿದರೆ ಅವರ ಆಕ್ಷೇಪಗಳು ನಿವಾರಣೆಯಾಗುತ್ತವೆ. ಇಂತಹ ದೃಶ್ಯಗಳನ್ನು ಅಲ್ಲಾಹನು ಪ್ರತಿಯೊಂದು ಕಾಲಗಳಲ್ಲಿ ತೋರಿಸುತ್ತಾ ಇರುತ್ತಾನೆ. ಈಗಲೂ ತೋರಿಸುತ್ತಿದ್ದಾನೆ. ಇಸ್ಲಾಮ್ ಧರ್ಮದ ಉಪದೇಶಗಳು ಹಳೆತಾಗಿಲ್ಲವೆಂದೂ ಅಹ್ಮದಿಯಾ ಜಮಾಅತಿಗೆ ಅಲ್ಲಾಹನು ನೀಡುವ ಬೆಂಬಲವನ್ನು ಹಿಂತೆಗೆದಿಲ್ಲ ಎಂದೂ ಈ ದೃಶ್ಯಗಳು ಸಾಬೀತು ಗೊಳಿಸುತ್ತವೆ.

ನಾವು ಈ ಕಾಣುತ್ತಿರುವುದೆಲ್ಲವೂ ಕೇವಲ ಮನುಷ್ಯ ಪ್ರಯತ್ನದಿಂದ ಸಾಧಿಸಲ್ಪಟ್ಟವುಗಳಲ್ಲ, ನಾನು ಹಿಂದಿನ ವಾರದ ಖುತುಬದಲ್ಲಿ ಹೇಳಿದ ಹಾಗೆ ಜಲ್ಸದ ಪರಿಸರ ಮೌನವಾಗಿ ತಬ್ಲೀಗ್ ಮಾಡುತ್ತಾ ಇರುತ್ತದೆ. ಜಲ್ಸದಲ್ಲಿ ಭಾಗವಹಿಸುವ ಪ್ರತಿಯೊಬ್ಬ ಅಹ್ಮದಿ ಮತ್ತು ಪ್ರತಿಯೊಬ್ಬ ಕಾರ್ಯಕರ್ತ ಮೌನವಾಗಿ ಕಾರ್ಯನಿರ್ವಹಿಸುವ ಮುಬಲ್ಲಿಗ್ ಆಗಿರುತ್ತಾರೆ. ಜಲ್ಸದ ಎಲ್ಲಾ ಕೆಲಸಗಳು ಮೌನವಾಗಿ ಒಂದು ಧಾರೆಯಲ್ಲಿ ಹರಿಯುತ್ತಾ ಇರುತ್ತವೆ, ಯಾವುದೇ ಅಸ್ತವ್ಯಸ್ತತೆ ಇಲ್ಲ, ಯಾವುದೇ ತಪ್ಪು ಶಬ್ದಗಳ ಪ್ರಯೋಗವಿರುವುದಿಲ್ಲ, ಎಲ್ಲ ಕಡೆಗಳಲ್ಲೂ ಮುಗುಳುನಗೆ ಸೂಸುತ್ತಿರುವ ವದನಗಳನ್ನು ಕಾಣುತ್ತಾ ಇರಬಹುದಾಗಿದೆ. ಚಿಕ್ಕ ಮಕ್ಕಳೂ, ವೃದ್ಧರೂ, ಮಹಿಳೆಯರೂ, ಪುರುಷರೂ ಸೇವಾಮನೋಭಾವದಿಂದ ತುಂಬಿರುತ್ತಾರೆ. ಅವರು ತಮಗೆ ವಹಿಸಿದ ಕೆಲಸಗಳಲ್ಲಿ ತಲ್ಲೀನರಾಗಿರುತ್ತಾರೆ. ಈ ದೃಶ್ಯಗಳನ್ನು ಕಂಡು ಅಹ್ಮದಿಯೇತರರು ಬಹಳ ಪ್ರಭಾವಿತರಾಗುತ್ತಾರೆ. ಜಲ್ಸಕ್ಕೆ ಪ್ರಥಮ ಬಾರಿ ಆಗಮಿಸುವ ಅಹ್ಮದಿಯ ವಿಶ್ವಾಸದಲ್ಲಿ ವರ್ಧನೆ ಉಂಟಾಗುತ್ತದೆ. ಯಾವಾಗಲೂ ಜಲ್ಸದಲ್ಲಿ ಭಾಗವಹಿಸುವವರ ವಿಶ್ವಾಸ ಸಹ ಶಕ್ತಿಗಳಿಸುತ್ತದೆ. ಅವರು ತಮ್ಮ ವಿಶ್ವಾಸವನ್ನು ವರ್ಧಿಸಿಕೊಂಡು ಇಲ್ಲಿಂದ ಹೋಗುತ್ತಾರೆ. ಕೆಲವರು ಒಳ್ಳೆಯ ಉದ್ದೇಶದವರು ಇರುತ್ತಾರೆ. ಮತ್ತೆ ಕೆಲವರು ತಮ್ಮ ಸ್ವಭಾವಗುಣಕ್ಕೆ ಅನುಸಾರವಾಗಿ ತಪ್ಪುಗಳನ್ನು ಹುಡುಕುತ್ತಾ ಇರುತ್ತಾರೆ. ಇಂತಹ ವಿಮರ್ಶಕರು ಸಹ ಈ ಸಾರಿ ಕಾರ್ಯಕರ್ತರ ಕೆಲಸ ಉತ್ತಮವಾಗಿತ್ತು ಅವರು ಬಹಳ ಸ್ನೇಹಭಾವದಿಂದ ವರ್ತಿಸಿದ್ದಾರೆ ಎಂದು ಹೇಳಿರುವರು.

ಕೆಲವು ಅಹ್ಮದಿಯೇತರ ಅತಿಥಿಗಳ ಅಭಿಪ್ರಾಯಗಳನ್ನು ಸಹ ನಾನೀಗ ವಿವರಿಸುವೆನು. ಈ ಸಾರಿ ಕಾಂಗೋ ಕನ್‌ಶಾಸದಿಂದ ಅಲ್ಲಿನ ಪ್ರಾಂತೀಯ ಅಸೆಂಬ್ಲಿಯ ಸ್ಪೀಕರ್ ಬೋಶಿವಾ ಎಂಬವರು ಪ್ರಥಮ ಬಾರಿ ನಮ್ಮ ಜಲ್ಸಕ್ಕೆ ಆಗಮಿಸಿದ್ದರು. ಅವರು ಬಂದೋಂದೋ ಪ್ರಾಂತ್ಯದ ಅಸೆಂಬ್ಲಿ ಸ್ಪೀಕರಾಗಿದ್ದಾರೆ. ಅವರು ಮೂರು ದಿನಗಳ ಜಲ್ಸದ ಕಾರ್ಯಕ್ರಮಗಳನ್ನು ಪೂರ್ಣವಾಗಿ ನೋಡಿದ ನಂತರ ಹೇಳಿದರು: ಇಲ್ಲಿಗೆ ಆಗಮಿಸಿದ ಪ್ರತಿಯೊಬ್ಬ ಹೇಗೆ ಭೇಟಿಯಾಗುತ್ತಾನೆಂದರೆ ಎಷ್ಟೋ ವರ್ಷಗಳಿಂದ ಪರಸ್ಪರ ಪರಿಚಯ ಇರುವವರು ಎಂಬಂತೆ. ಪ್ರತಿಯೊಬ್ಬ ಸಲಾಮ್ ಹೇಳುತ್ತಾರೆ. ಇದೇ ನಿಜವಾದ ಪ್ರೀತಿಯಾಗಿದೆ. ಇದೇ ನಿಜವಾದ ಧರ್ಮವಾಗಿದೆ. ಅವರು ತಮ್ಮ ನಾಡಿನಲ್ಲಿ ನಡೆದ ಒಂದು ಘಟನೆಯನ್ನು ಸ್ಮರಿಸುತ್ತಾ ಈರೀತಿ ಹೇಳಿದರು: ಒಮ್ಮೆ ನಮ್ಮ ದೇಶದಲ್ಲಿ ಪ್ರಾಂತ್ಯದ ಸರಕಾರದ ವತಿಯಿಂದ ಒಂದು ಸಭೆ ಜರಗಿಸಲಾಗಿತ್ತು. ಆ ಸಭೆಯ ಪ್ರಥಮ ದಿನದಂದೇ ದುರ್ವ್ಯವಸ್ಥೆಯ ಕಾರಣದಿಂದ ಇಪ್ಪತ್ತಾರು ಜನರು ಮೃತಪಟ್ಟರು. ನಂತರ ಆ ಸಭೆಯನ್ನು ರದ್ದುಗೊಳಿಸಲಾಯಿತು. ಇಲ್ಲಿನ ಜಲ್ಸದಲ್ಲಿ ಸಾವಿರಗಟ್ಟಲೆ ಜನರು ಜಮಾಯಿಸಿದ್ದಾರೆ. ಆದರೆ ಇಲ್ಲಿ ಅಲ್ಪ ಸ್ವಲ್ಪ ಅವ್ಯವಸ್ಥೆಯನ್ನು ಸಹ ಕಾಣಲಿಲ್ಲ. ನೂಕುನುಗ್ಗಲು ಅಥವಾ ಕಲಹ ತಲೆದೋರಲಿಲ್ಲ. ಇಲ್ಲಿ ಯಾರೂ ಸಹ ಉಚ್ಚ ಧ್ವನಿಯಲ್ಲಿ ಮಾತನಾಡಲೂ ಇಲ್ಲ. (ಚಿಕ್ಕ ಮಕ್ಕಳು ಸೇವೆ ಮಾಡುವುದನ್ನು ಕಂಡು ಭಾವೋದ್ವೇಗ ಭರಿತರಾಗಿ ಹೇಳಿದರು): ಈ ಮಕ್ಕಳು ನೀರು ಅಥವಾ ಬೇರೆ ಏನಾದರೂ ತಿಂಡಿ ಸರಬರಾಜು ಮಾಡುವಾಗ ನಮಗೆ ಅದರ ಆವಶ್ಯಕತೆ ಇಲ್ಲದಿದ್ದರೂ ಬೇಡ ಎಂದು ಅವರೊಂದಿಗೆ ಹೇಳಲು ಮನಸ್ಸು ಬರುವುದಿಲ್ಲ.

ಬೆನಿನ್ ದೇಶದ ಗೃಹಮಂತ್ರಿ ಫ್ರಾನ್ಸಿಸ್ ಹೀಗೆ ಹೇಳಿದರು: ಜಲ್ಸದ ಉತ್ತಮ ವ್ಯವಸ್ಥೆಯನ್ನು ಹೊಗಳಲು ನನ್ನಲ್ಲಿ ಶಬ್ದಗಳಿಲ್ಲ. ಅತ್ಯಂತ ಶ್ರೇಷ್ಠ ಮತ್ತು ಸುವ್ಯವಸ್ಥಿತ ಜಲ್ಸ ಇದಾಗಿತ್ತು. ಜಮಾಅತಿನ ಜನರು ಅನ್ಯರಿಗೋಸ್ಕರ ಸ್ವಯಂಸೇವಕರಾಗಿ ಕೆಲಸ ಮಾಡುವ ಅಸಾಧಾರಣ ಮನೋಭಾವವನ್ನು ನಾನು ಕಂಡೆನು. ಈ ಮನೋಭಾವ ಪ್ರತಿಯೊಬ್ಬ ಅಹ್ಮದಿಯ ಆತ್ಮದ ಆಹಾರವಾಗಿ ಬಿಟ್ಟಿದೆ. ಇದೇ ಕಾರಣದಿಂದ ಅಹ್ಮದಿಯಾ ಜಮಾಅತ್ ಅಭಿವೃದ್ಧಿಯ ಮಾರ್ಗದಲ್ಲಿ ಸಾಗುತ್ತಿದೆ. ನಾನು ಮಕ್ಕಳನ್ನು ಮಾತ್ರವಲ್ಲ ವೃದ್ಧರನ್ನೂ ತಮ್ಮ ಸ್ವಂತ ಆಹಾರದ ಬಗ್ಗೆ ಚಿಂತೆ ಇಲ್ಲದವರನ್ನಾಗಿ ಕಂಡೆನು. ಅವರಿಗಿದ್ದ ಏಕಮಾತ್ರ ಚಿಂತೆ "ನಮ್ಮ ಜಲ್ಸ ಜಯಶಾಲಿಯಾಗಬೇಕು" ಎಂಬುದಾಗಿತ್ತು. ತಮ್ಮ ಉದ್ದೇಶ ಸಾಧನೆಗೋಸ್ಕರ ಇಷ್ಟು ಕಷ್ಟಪಟ್ಟು ದುಡಿಯುವವರನ್ನು ನಾನು ಹಿಂದೆ ಎಂದೂ ಕಾಣಲಿಲ್ಲ. ನಾನು ಲೋಕದ ವಿವಿಧ ದೇಶಗಳನ್ನು ಕಂಡಿದ್ದೇನೆ. ಅಮೇರಿಕದಂತಹ ಮಹಾಶಕ್ತಿ ದೇಶದ ಸರಕಾರ ಮಾಡುವ ವ್ಯವಸ್ಥೆಗಳನ್ನೂ ಕಂಡಿದ್ದೇನೆ. ಆದರೆ ಮಹಾಶಕ್ತಿ ರಾಷ್ಟ್ರಗಳು ಸಹ ಇಷ್ಟು ಸುವ್ಯವಸ್ಥಿತವಾದ ಮತ್ತು ಶಾಂತಮಯ ಕಾರ್ಯಕ್ರಮಗಳನ್ನು ಜರಗಿಸುವುದನ್ನು ಎಂದೂ ಕಾಣಲಿಲ್ಲ. ಇಲ್ಲಿ ಚಿಕ್ಕ ಮಕ್ಕಳು ಸಹ ತಮಗೆ ದೊರಕುವ ಮಾರ್ಗ ನಿರ್ದೇಶಗಳನ್ನು ಬಹಳ ನಿಷ್ಠೆಯಿಂದ ಪಾಲಿಸುತ್ತಾರೆ. ಅವರು ಮತ್ತೂ ಹೇಳಿದರು: ಈ ಜಮಾಅತಿನ ಜಾಗತಿಕ ಶಕ್ತಿಯ ರಹಸ್ಯವೇನೆಂದರೆ ಈ ಜಮಾಅತಿಗೆ ಒಬ್ಬ ಖಲೀಫರ ನೇತೃತ್ವವಿದೆ ಎಂಬುದು. ನಾನು ಸ್ಪಷ್ಟವಾಗಿ ಹೇಳಲು ಬಯಸುತ್ತೇನೆ– ಇಂದು ಲೋಕದಲ್ಲಿ ಶಾಂತಿ ಸ್ಥಾಪಿಸಲು ಪ್ರಯತ್ನ ಮಾಡುತ್ತಾ ಇರುವುದು ಅಹ್ಮದಿಯಾ ಜಮಾಅತ್ ಮಾತ್ರವಾಗಿದೆ. ಭ್ರಾತೃತ್ವವನ್ನು ಉಪದೇಶಿಸುವ, ಸಹನೆಯನ್ನು ಪ್ರತಿಪಾದಿಸುವ, ಮತ್ತು ಶಾಂತಿ ಸ್ಥಾಪನೆಯ ಪತಾಕೆಯನ್ನು ಎತ್ತಿ ಹಿಡಿಯುವವರು ಲೋಕದಲ್ಲಿ ಇಂದು ಅಹ್ಮದಿಯಾ ಜಮಾಅತಿನವರು ಮಾತ್ರವಾಗಿದ್ದಾರೆ.

ಯುಗಾಂಡಾ ದೇಶದ ಡಿಫೆನ್ಸ್ ಮಿನಿಸ್ಟರ್ ಡಾಕ್ಟರ್ ಚುಯಿಂಗಾ ಜಲ್ಸದಲ್ಲಿ ಭಾಗವಹಿಸಲು ಬಂದಿದ್ದರು. ಅವರು ಹೀಗೆ ಹೇಳಿದರು: ಜಲ್ಸದ ದೃಶ್ಯ ವಿವರಿಸಲು ಸಾಧ್ಯವಿಲ್ಲದ ರೀತಿಯದ್ದಾಗಿತ್ತು. ಎರಡು ದಿನ ಜಲ್ಸದ ಕಾರ್ಯಕ್ರಮಗಳನ್ನೂ ಪ್ರದರ್ಶನವನ್ನೂ ಕಂಡೆನು. (ನನ್ನನ್ನು ಭೇಟಿಯಾಗಿ ಅವರು ಹೇಳಿದರು) ಇಂತಹ ಶಿಸ್ತು ಕೇವಲ ಸೈನ್ಯದಲ್ಲಿರಲು ಸಾಧ್ಯ.

ನಾನು ಹೇಳಿದೆ– ನಿಮ್ಮ ಸೈನ್ಯ ಸಹ ಇಂತಹ ಶಿಸ್ತು ಹೊಂದಿರಲಾರದು. ಆಗ ಅವರು ಹೇಳಿದರು– ನೀವು ಹೇಳಿದುದು ಸರಿಯಾಗಿದೆ. ಅದರ ಬಗ್ಗೆ ಸಂಶಯವಿಲ್ಲ. ಲೋಕದ ಯಾವುದೇ ಸೈನ್ಯದಲ್ಲಿ ಸಹ ಇಂತಹ ಶಿಸ್ತು ಇರಲಾರದು.

ನೈಜೀರಿಯಾದಲ್ಲಿ ಒಂದು ಟೆಲಿವಿಶನ್ ಡೈರೆಕ್ಟರ್ ಆಗಿರುವ ಇಸ್‌ಹಾಖ್ ಸಾಹೇಬ್ ಸಹ ಆಗಮಿಸಿದ್ದರು. ಅವರು ಹೇಳುತ್ತಾರೆ: ಜಲ್ಸದ ವ್ಯವಸ್ಥೆ ಇಂಟರ್‌ನೇಶನಲ್ ಮಟ್ಟದ್ದಾಗಿತ್ತು, ವಿಮಾನ ನಿಲ್ದಾಣದಲ್ಲಿ ಸ್ವಾಗತಿಸುವುದರಿಂದ ಮೊದಲ್ಗೊಂಡು ಜಲ್ಸ ಮುಕ್ತಾಯವಾಗುವ ತನಕದ ವ್ಯವಸ್ಥೆ ಪ್ರತಿಯೊಂದು ರೀತಿಯಲ್ಲಿಯೂ ಅತ್ಯುತ್ತಮವಾಗಿತ್ತು. ಜಲ್ಸದ ಭಾಷಣಗಳು ಜ್ಞಾನಭರಿತವಾಗಿದ್ದುವು. ನಾನು ಪ್ರಥಮ ಬಾರಿ **"ಆಲಮೀ ಬೈಅತ್"** ದೃಶ್ಯವನ್ನು ಕಂಡು ಬಹಳ ಭಾವೋದ್ವೇಗಭರಿತನಾದೆನು. ಅದು ನನ್ನ ಹೃದಯದಲ್ಲಿ ಆಳವಾಗಿ ಪ್ರಭಾವ ಬೀರಿತು. ಖಲೀಫತುಲ್ ಮಸೀಹ್ ಹಾಜರಾಗಿರುವಾಗ ಜಲ್ಸದ ದೃಶ್ಯ ಬಹಳ ಪ್ರಭಾವಶಾಲಿಯಾಗಿತ್ತು. ನನ್ನ ಭಾವನೆಗಳನ್ನು ಆಗ ನಿಯಂತ್ರಿಸಲಾಗುತ್ತಿರಲಿಲ್ಲ. ಸಾವಿರಗಟ್ಟಲೆ ಜನರು ತಲೆ ತಗ್ಗಿಸಿ ತಮ್ಮ ಇಮಾಮರ ಮುಂದೆ ಕುಳಿತಿರುವುದನ್ನು ಕಾಣುವಾಗ ನಾನು ಭಾವೋದ್ವೇಗಭರಿತನಾಗಿ ಕಣ್ಣೀರು ಸುರಿಸಿದೆ. ಇಂತಹ ದೃಶ್ಯ ನನ್ನ ಜೀವನದಲ್ಲಿ ನಾನು ಹಿಂದೆಂದೂ ಕಾಣಲಿಲ್ಲ. ನನ್ನೊಂದಿಗೆ ಅಹ್ಮದಿಯಾ ಜಮಾಅತಿನ ಜನರು ಪ್ರೀತಿ ಪೂರ್ವಕವಾಗಿ ಜಲ್ಸದ ಸಮಯದಲ್ಲಿ ಮತ್ತು ಅನಂತರ ವರ್ತಿಸಿದ ರೀತಿಯ ಬಗ್ಗೆ ನಾನು ಸ್ವದೇಶಕ್ಕೆ ಹೋಗಿ ಹೇಳುವೆನು– ಎಲ್ಲಾ ಮುಸ್ಲಿಮರು ಈ ಅತ್ಯುತ್ತಮ ಮಾದರಿಯನ್ನು ತಮ್ಮದನ್ನಾಗಿ ಮಾಡಿಕೊಳ್ಳಬೇಕು ಎಂದು.

ನೈಜೀರಿಯಾದ ನೇಶನಲ್ ಮಿರರ್ ಎಂಬ ಪತ್ರಿಕೆಯ ಉಪಸಂಪಾದಕಿ ಸಕೀನ ಸಾಹಿಬ ಬಂದಿದ್ದರು. ಅವರು ಹೀಗೆ ಹೇಳುತ್ತಾರೆ– ಜಲ್ಸಕ್ಕೆ ಆಗಮಿಸಿದಾಗ ನನಗೆ ತಿಳಿಯಿತು ಜಮಾಅತಿನ ಪ್ರತಿಯೊಬ್ಬರೂ ಪರಸ್ಪರ ಪ್ರೀತಿಯ ಸಂಬಂಧ ಹೊಂದಿದ್ದಾರೆಂದು. ಪ್ರತಿಯೊಬ್ಬ ಮುಗುಳುನಗೆಯೊಂದಿಗೆ ಕಾಣುತ್ತಾರೆ ಮತ್ತು ಒಬ್ಬರಿನ್ನೊಬ್ಬರಿಗೆ ಸಹಾಯ ಮಾಡಲು ಸಿದ್ಧರಾಗಿರುತ್ತಾರೆ. ನಾನು ಪತ್ರಕರ್ತೆಯಾಗಿ ಹದಿನೆಂಟು ವರ್ಷಗಳ ಅನುಭವಗಳಿಸಿದ್ದೇನೆ. ನಾನು ಸ್ಪಷ್ಟವಾಗಿ ಮತ್ತು ಅಭಿಮಾನ ಪೂರ್ವಕವಾಗಿ ಹೇಳಲು ಬಯಸುತ್ತೇನೆ– ಮುಸ್ಲಿಮರ ಸಂಘಟನೆಗಳಲ್ಲಿ ಅಹ್ಮದಿಯಾ ಜಮಾಅತ್ ಮಾತ್ರ ಇಸ್ಲಾಮ್ ಧರ್ಮದ ಆಜ್ಞೆಗಳನ್ನು ಪಾಲಿಸುತ್ತಿದೆ ಮತ್ತು ಅದು ಇತರರಿಗೆ ಉತ್ತಮ ಮಾದರಿಯಾಗಿದೆ. ಜಲ್ಸದ ವ್ಯವಸ್ಥೆ ಎಲ್ಲಾ ರೀತಿಗಳಲ್ಲೂ ಪರಿಪೂರ್ಣವಾಗಿತ್ತು.

ಬೆಲ್‌ಜಿಯಂ ದೇಶದ ಕಸ್ತಾರ್‌ಲಿ ಎಂಬ ನಗರದ ಮೇಯರ್ (ಅವರು ಫ್ಲೇಮಿಶ್ ಪಾರ್ಲಿಮೆಂಟ್ ಸದಸ್ಯರು ಸಹ ಆಗಿದ್ದಾರೆ) ಹೀಗೆ ಹೇಳಿದರು– ಈ ಜಲ್ಸಕ್ಕೆ ಆಗಮಿಸಿ ನನಗೆ ಇಸ್ಲಾಮಿನ ನಿಜವಾದ ತತ್ವಗಳು ತಿಳಿದುವು. ಜನರು ಈ ತತ್ವಗಳನ್ನು ಹೇಗೆ ಪಾಲಿಸುತ್ತಾರೆಂದು ನಾನು ಕಣ್ಣಾರೆ ಕಂಡೆನು. ಜನರು ಪರಸ್ಪರ ಪ್ರಕಟಿಸುವ ಪ್ರೀತಿ ನನ್ನನ್ನು ಬಹಳ ಪ್ರಭಾವಕ್ಕೊಳಪಡಿಸಿತು. ನಾನು ಅಹ್ಮದಿಯಾ ಜಮಾಅತಿನ ಜನರನ್ನು ಸ್ಥಳೀಯ ಮಟ್ಟದಲ್ಲಿ ನೋಡಿದ್ದೆನು. ಈಗ ಜಾಗತಿಕ ಮಟ್ಟದಲ್ಲಿ ಅವರನ್ನು ಕಂಡೆನು. ಈ ಜಮಾಅತಿಗೆ ಸೇರಿದವರು ಏನು ಹೇಳುತ್ತಾರೋ ಅದೇ ಪ್ರಕಾರ ವರ್ತಿಸುತ್ತಾರೆ ಎಂಬುದನ್ನು ಅನುಭವದಿಂದ ತಿಳಿದುಕೊಂಡೆನು. ಜಲ್ಸದ ಇಷ್ಟು ಉತ್ತಮ ವ್ಯವಸ್ಥೆ ಬೇರೆ ಎಲ್ಲಿಯೂ ಕಾಣಲು ಸಾಧ್ಯವಿಲ್ಲ.

ಬೆಲ್‌ಜಿಯಂ ದೇಶದ ಟರ್ನ್ ಹಾರ್ಟ್ ನಗರದ ವೈಸ್ ಮೇಯರ್ ಜಲ್ಸದಲ್ಲಿ ಭಾಗವಹಿಸಿದ್ದರು. ಅವರು ಹೀಗೆ ಹೇಳಿದರು: ಇಸ್ಲಾಮ್ ಧರ್ಮದ ಬಗ್ಗೆ ನಾವು ವಿವಿಧ ಮಾಧ್ಯಮಗಳಲ್ಲಿ ನೋಡಿದುದಕ್ಕೆ ಸಂಪೂರ್ಣ ವಿರುದ್ಧವಾಗಿ ನಾವು ಈ ಜಲ್ಸಕ್ಕೆ ಬಂದು ಕಂಡೆವು. ನೀವು ತೋರಿಸುತ್ತಿರುವ ಇಸ್ಲಾಮ್ ಧರ್ಮದ ಚಿತ್ರವು ನೈಜ ಇಸ್ಲಾಮ್ ಧರ್ಮದ್ದು ಆಗಿದೆ. ಇಸ್ಲಾಮ್ ಧರ್ಮದ ತತ್ವಗಳು ಪ್ರಿಯಕರವಾಗಿವೆ ಎನ್ನುವುದರ ಬಗ್ಗೆ ಯಾವ ಸಂಶಯವೂ ಇಲ್ಲ. ನೀವು ಇಸ್ಲಾಮ್ ಧರ್ಮದ ವಾಸ್ತವಿಕ ತತ್ವಗಳನ್ನು ವಿವರಿಸಿ ಮಾನವರನ್ನೆಲ್ಲಾ ಒಂದು ಪತಾಕೆಯ ಕೆಳಗೆ ಜಮಾಯಿಸಲು ಪ್ರಯತ್ನಿಸುತ್ತಿರುವಿರಿ. ಇದು ನಿಶ್ಚಯವಾಗಿಯೂ ಬಹಳ ಉತ್ತಮ ಸದ್ಗುಣವಾಗಿದೆ. ನನ್ನ ನಗರದಲ್ಲಿ ಅಹ್ಮದಿಯಾ ಜಮಾಅತ್ ಮಾನವರ ಸೇವೆ ಮಾಡುತ್ತಿರುವುದನ್ನು ನಾನು ಕಂಡಿರುವೆನು. ಆದರೆ, ಈ ಜಲ್ಸಕ್ಕೆ ಬಂದನಂತರ ನನಗೆ ತಿಳಿಯಿತು: ಅಹ್ಮದಿಯಾ ಜಮಾಅತ್ ಲೋಕದಾದ್ಯಂತ ಮಾನವ ಸೇವೆಯಲ್ಲಿ ನಿರತವಾಗಿದೆ ಎಂದು.

ಬೆಲ್‌ಜಿಯಮ್ ನಗರದ ವೈಸ್ ಮೇಯರ್‌ರವರ ಪತ್ನಿ ಹೀಗೆ ಹೇಳಿದರು: ನಾನು ಮಹಿಳೆಯರ ಸಮ್ಮೇಳನ ಸ್ಥಳಕ್ಕೆ ಸಹ ಬೇಟಿ ನೀಡಿದೆ. ನನಗೆ ಅಲ್ಲಿ ಲಭಿಸಿದ ಪ್ರೀತಿ ಮತ್ತು ವಾತ್ಸಲ್ಯದ ಅನುಭವ ನನಗೆ ಬೇರೆಲ್ಲೂ ದೊರಕಿರಲಿಲ್ಲ. ಮಹಿಳೆಯರ ಜಲ್ಸಗಾಹ್‌ಗೆ ಖಲೀಫರು ಆಗಮಿಸಿದಾಗ ಅದೊಂದು ಅದ್ಭುತವಾದ ವಾತಾವರಣವಾಗಿತ್ತು. ಅಲ್ಲಿ ಅಷ್ಟೆಲ್ಲಾ ಹೆಚ್ಚಿನ ಸಂಖ್ಯೆಯಲ್ಲಿ ಮಹಿಳೆಯರು ಜಮಾಯಿಸಿದ್ದರೂ ಪೂರ್ಣವಾಗಿ ನಿಶ್ಶಬ್ದತೆ ವ್ಯಾಪಿಸಿತ್ತು. ಖಲೀಫರ ಭಾಷಣವನ್ನು ಮಹಿಳೆಯರು ಮೌನವಾಗಿ ಆಲಿಸಿದರು. ಮಹಿಳೆಯರಿಗೆ ಸಂಬಂಧಿಸಿ ಇಸ್ಲಾಮಿನ ಉಪದೇಶಗಳ ಬಗ್ಗೆ ಇದ್ದ ನನ್ನ ಸಂಶಯಗಳು ಖಲೀಫರ ಭಾಷಣವನ್ನು ಆಲಿಸಿದಾಗ ನಿವಾರಣೆ ಗೊಂಡವು. ನಾನು ಮಹಿಳೆಯರ ಜಲ್ಸಗಾಹ್‌ಗೆ ಹೋದಾಗ ನನಗೆ ಭಯವಾಗುತ್ತಿತ್ತು. ಆದರೆ ಖಲೀಫರ ಭಾಷಣ ಆಲಿಸಲು ಪ್ರಾರಂಭಿಸಿದಾಗ ನನ್ನ ಭಯವೆಲ್ಲಾ ದೂರ ಸರಿಯಿತು.

ಮಾಲ್‌ಟಾ ದೇಶದ ಒಬ್ಬ ಪತ್ರಕರ್ತ ಆಗಮಿಸಿದ್ದರು. ಅವರು ಒಂದು ಟಿ.ವಿ. ಪ್ರೋಗ್ರಾಮ್ ವ್ಯವಸ್ಥಾಪಕರೂ ಆಗಿದ್ದಾರೆ. ಐವಾನ್ ಬಾತೂಲೂ ಎಂಬ ಹೆಸರಿನ ಅವರು ಮೂರು ವರ್ಷದಿಂದ ಅಹ್ಮದಿಯಾ ಜಮಾಅತ್‌ನೊಂದಿಗೆ ಸಂಬಂಧ ಹೊಂದಿದ್ದಾರೆ. ಅವರು ನನ್ನ ಟಿ.ವಿ. ಸಂದರ್ಶನ ನಡೆಸಿದರು. ಅವರು ಹೀಗೆ ಹೇಳಿದರು: 125 ವರ್ಷಗಳಲ್ಲಿ ಅಹ್ಮದಿಯಾ ಜಮಾಅತ್ 206 ದೇಶಗಳಲ್ಲಿ ಸ್ಥಾಪಿತವಾಗಿದೆ. ಇದು ದೇವ ಸಹಾಯ ಲಭಿಸದೆ ಸಾಧ್ಯವಾಗದು. ಜಲ್ಸ ಬಹಳ ಸುವ್ಯವಸ್ಥೆಯಿಂದ ಕೂಡಿತ್ತು. ಸುವ್ಯವಸ್ಥೆ ಇರುವಲ್ಲಿ ದೇವ ಸಹಾಯವಿರುತ್ತದೆ. ಕ್ರೈಸ್ತ ಧರ್ಮಾವಲಂಬಿಯಾದ ಈ ವ್ಯಕ್ತಿ ಟಿ.ವಿ.ಗೋಸ್ಕರ ನನ್ನ ಸಂದರ್ಶನ ರಿಕಾರ್ಡ್ ಮಾಡಿದ ನಂತರ ಹೀಗೆ ಹೇಳಿದರು: ನಾನು ನನ್ನ ದೇಶದಲ್ಲಿ ಟಿ.ವಿ.ಗೋಸ್ಕರ ಒಂದು ಗಂಟೆಯ ಒಂದು ಡೊಕ್ಯುಮೆಂಟರಿ ಸಹ ಅಹ್ಮದಿಯಾ ಜಮಾಅತ್ ಬಗ್ಗೆ ನಿರ್ಮಿಸುವೆನು.

ಈ ಜಲ್ಸಕ್ಕೆ ಅನೇಕ ಪತ್ರಿಕಾ ವರದಿಗಾರರು ಈ ದೇಶದಿಂದಲೂ ವಿದೇಶದಿಂದಲೂ ಆಗಮಿಸಿದ್ದರು. ಒಬ್ಬ ಹಿಂದೂ ಪತ್ರಕರ್ತೆ ಹೀಗೆ ಹೇಳಿದರು: ಮುಸ್ಲಿಮರ ಕಾರ್ಯಕ್ರಮಗಳಿಗೆ

ಹೋಗಬೇಡ ಎಂದು ನನ್ನ ತಾಯಿ ಹೇಳಿದ್ದರು. "ಅವರು ಬಹಳ ಅಪಾಯಕಾರಿ ಜನರು. ಅವರು ನಿನ್ನನ್ನು ಕೊಂದು ಹಾಕಿದರೆ ನಿನಗೇನಾಯಿತೆಂದು ಯಾರಿಗೂ ತಿಳಿಯಲಾರದು" ಎಂದು ನನ್ನ ತಾಯಿ ನನ್ನೊಂದಿಗೆ ಹೇಳಿದ್ದರು. ನಾನು ನನ್ನ ತಾಯಿಯ ಮಾತನ್ನು ಅಂಗೀಕರಿಸಲಿಲ್ಲ. ಇಲ್ಲಿ ನನಗುಂಟಾದ ಅನುಭವದ ಪ್ರಕಾರ ನಾನು ನನ್ನ ತಾಯಿಯೊಂದಿಗೆ ಹೇಳುವೆನು– "ಅಹ್ಮದಿಯರು ನಮಗಿಂತ ಹೆಚ್ಚು ಶಾಂತಿ ಪ್ರಿಯರಾಗಿದ್ದಾರೆ. ಅವರ ಮಾತುಗಳು ಎಷ್ಟು ಸುಂದರವಾಗಿವೆ ಎಂದರೆ ನೀವು ಸಹ ಅಲ್ಲಿಗೆ ಹೋಗಿ ನೋಡಬೇಕು." ಅವರು ಹೇಳುತ್ತಾರೆ– ಈ ಜಲ್ಸದಲ್ಲಿ ಭಾಗವಹಿಸುವ ಭಾಗ್ಯ ನನಗೆ ದೊರಕಿದುದಕ್ಕೆ ನಾನು ತುಂಬಾ ಆಭಾರಿಯಾಗಿದ್ದೇನೆ.

ಬೆಲಿಝ್‌ನಲ್ಲಿ ಈ ವರ್ಷ ಜಮಾಅತ್ ಸ್ಥಾಪಿತವಾಗಿದೆ. ಅಲ್ಲಿನ ಓರ್ವ ಪತ್ರಕರ್ತೆ ಮರ್‌ಯಮ್ ಅಬ್ದುಲ್ ಸಾಹಿಬ ಜಲ್ಸಕ್ಕೆ ಬಂದಿದ್ದರು. ಅವರು ಬೆಲಿಝ್ ಕ್ರೀಮ್ ಟೀವಿಯ ಏಂಕರ್ ಸಹ ಆಗಿದ್ದಾರೆ. ಅವರು ಹೀಗೆ ಹೇಳಿದರು: ಅಹ್ಮದಿಯಾ ಜಮಾಅತಿನ ಜಲ್ಸದಲ್ಲಿ ಭಾಗವಹಿಸಿದ ಕಾರಣ ನನಗುಂಟಾದ ಅನುಭವ ನಾನು ಪ್ರತೀಕ್ಷಿಸಿದ್ದಕ್ಕಿಂತಲೂ ಹೆಚ್ಚು ಸಂತೋಷಕರವಾಗಿದೆ. **ಎಲ್ಲರೊಂದಿಗೂ ಪ್ರೀತಿ ಯಾರೊಂದಿಗೂ ದ್ವೇಷವಿಲ್ಲ** ಎಂಬ ಧ್ಯೇಯವಾಕ್ಯ ನನ್ನ ಮೇಲೆ ಉತ್ತಮ ಪ್ರಭಾವ ಬೀರಿದೆ. ನಾನು ಇದರ ಬಗ್ಗೆ ಬಹಳ ಚಿಂತಿಸಿದೆ. ಈ ಕೆಲವು ದಿನಗಳಲ್ಲಿ ಎಲ್ಲಾ ಕಡೆಗಳಲ್ಲೂ ನನಗೆ ಪ್ರೀತಿಯನ್ನು ಮಾತ್ರ ಕಾಣಲು ಸಾಧ್ಯವಾಯಿತು. ಈ ಜಮಾಅತ್ ಮೂಲಕ ನನಗೆ ಬಹಳ ಲಾಭವಾಗಿದೆ. ನಾನು ಕೃತಜ್ಞತೆಯಿಂದ ಯಾವಾಗಲೂ ಅದನ್ನು ನೆನಪಿನಲ್ಲಿಡುವೆನು.

ಸಿಯೆರ್‍ರಾಲಿಯೋನ್ ದೇಶದಿಂದ ಅಲ್ಲಿನ ಇಂಟರ್ ರಿಲೀಜಿಯಸ್ ಕೌನ್ಸಿಲ್‌ನ ಜನರಲ್ ಸೆಕ್ರಟರಿ ಡಾಕ್ಟರ್ ಉಸ್ಮಾನ್ ಘೂಘಾ ಆಗಮಿಸಿದ್ದರು. ಅಲ್ಲಿನ ಯುನಿವರ್ಸಿಟಿಯ ವಿಜ್ಞಾನ ವಿಭಾಗದ ಮುಖ್ಯಸ್ಥ ಹಾಗೂ ಮುಸ್ಲಿಮ್ ಕಾಂಗ್ರೆಸ್ ಜನರಲ್ ಸೆಕ್ರಟರಿ ಆಗಿರುವ ಪ್ರೊಫೆಸರ್ ಕರೀಮ್ ಸಾಹಿಬ್ ಸಹ ಆಗಮಿಸಿದ್ದರು. ಸಿಯೆರ್‍ರಾಲಿಯೋನ್ ದೇಶದ ರಾಜಧಾನಿ ಫ್ರೀಟೌನ್‌ನಲ್ಲಿ ಆಡಳಿತ ಪಕ್ಷದ ಚೆಯರ್‌ಮ್ಯಾನ್ ಆಗಿರುವ ಬಂಕೂರಾ ಸಾಹಿಬ್ ಆಗಮಿಸಿದ್ದರು. ಅಲ್ಲಾಹನ ಅನುಗ್ರಹದಿಂದ ಅವರು ಬೈಅತ್ ಮಾಡಿದ್ದಾರೆ. ಅವರು ನನ್ನನ್ನು ಸಂದರ್ಶಿಸಿದಾಗ ಹೇಳಿದರು: ಈ ಜಲ್ಸದ ಕಾರ್ಯಕ್ರಮಗಳನ್ನು ಸಿಯೆರ್‍ರಾಲಿಯೋನ್ ಟಿ.ವಿ. ಲೈವ್ ಆಗಿ ಪ್ರದರ್ಶಿಸಿದೆ. ಸಿಯೆರ್‍ರಾಲಿಯೋನಿನ ಅಧ್ಯಕ್ಷರು ಸಹ ಈ ಪ್ರಸಾರವನ್ನು ವೀಕ್ಷಿಸಿದ್ದಾರೆ. ಜಲ್ಸಕ್ಕೆ ಕಳುಹಿಸಲಾದ ತನ್ನ ಪ್ರತಿನಿಧಿಗಳಿಗೆ ಫೋನ್ ಮಾಡಿ ಜಲ್ಸಕ್ಕೆ ಶುಭಾಶಂಸೆಗಳನ್ನು ಕೋರಿರುತ್ತಾರೆ ಎಂದು ಹೇಳಿದರು.

ಈ ವರ್ಷ ಟ್ರಿನಿಡಾಡ್ ಟೊಬೇಗೋ ದೇಶದ ಮಿನಿಸ್ಟರ್ ಫಾರ್ ಲೀಗಲ್ ಎಫಯರ್ಸ್ ಮಿಸ್ಟರ್ ಪ್ರಕಾಶ್ ರಮಾದಾರ್ ಜಲ್ಸಕ್ಕೆ ಆಗಮಿಸಿದ್ದರು. ಅವರು ಹೇಳಿದರು: ಖಲೀಫರ ಬಗ್ಗೆ ಜಮಾಅತಿನ ಜನರಿಗಿರುವ ಪ್ರೀತಿಯನ್ನು ಶಬ್ದಗಳಲ್ಲಿ ವಿವರಿಸಲಾಗದು. ಈ ಜಲ್ಸದ ವ್ಯವಸ್ಥೆ ಅಮೋಘವಾಗಿದೆ. ಈ ಜಲ್ಸದಲ್ಲಿ ಕೆಲಸ ಮಾಡುವವರ ನಿಷ್ಠೆ ಮತ್ತು ಆಸಕ್ತಿ ತೋರಿಸುವುದೇನೆಂದರೆ ಈ ಜಮಾಅತ್ ಮಾನವ ನಿರ್ಮಿತವಲ್ಲ. ಇದರ ಹಿಂದೆ ದೈವಿಕ ಹಸ್ತ ಕಾರ್ಯಪ್ರವೃತ್ತವಾಗಿದೆ. ಈ ಜಲ್ಸದಲ್ಲಿ ಭಾಗವಹಿಸಿ ನಾನು ಆಂತರಿಕವಾಗಿ ಕಂಪಿಸಿದೆನು. ನನ್ನ ಬಗ್ಗೆ ಪ್ರಾರ್ಥಿಸಿರಿ. ನಾನು ವಿಶ್ವಾಸದಿಂದಲೂ, ನಿಷ್ಠೆಯಿಂದಲೂ ವಿನಯಾನ್ವಿತನಾಗಿಯೂ ಜೀವಿಸುವಂತಾಗಲು ಅಲ್ಲಾಹನು ಅನುಗ್ರಹಿಸಲಿ ಎಂದು.

ಮೆಕ್ಸಿಕೋ ದೇಶದ ಒಬ್ಬ ಮಹಿಳೆ ಗಿಯಾನ ಹೇಳುತ್ತಾರೆ: ಈ ಜಲ್ಸ ನನಗೆ ಅನೇಕ ವಿಷಯಗಳನ್ನು ಕಲಿಸಿದೆ. ನನಗೆ ನನ್ನ ಜೀವಿತದ ವಾಸ್ತವಿಕತೆಯ ಅರಿವಾಯಿತಲ್ಲದೆ ಮುಸ್ಲಿಮ್ ಲೋಕದ ಇಂದಿನ ಪರಿಸ್ಥಿತಿಯ ಕಾರಣಗಳು ಸಹ ತಿಳಿದುವು. ನನಗೆ ಒಂದು ಸಂಘಟನೆ ಬಗ್ಗೆ ಅದು ಬಹಳ ಐಕ್ಯತೆಯಿಂದಿದೆ ಎಂದೂ ವಿವಿಧ ದೇಶಗಳಲ್ಲಿ ಅದರ ಕೇಂದ್ರಗಳು ಇವೆ ಎಂದೂ ತಿಳಿಸಲಾಗಿತ್ತು. ಈಗ ಈ ಜಲ್ಸದಲ್ಲಿ ಭಾಗವಹಿಸಿದ ನಂತರ ನನಗೆ ತಿಳಿದುದೇನೆಂದರೆ ನನಗೆ ತಿಳುವಳಿಕೆ ನೀಡಲಾದ ಸಂಘಟನೆ ಅಹ್ಮದಿಯಾ ಜಮಾಅತಿನಷ್ಟು ಐಕ್ಯತೆ ಹೊಂದಿಲ್ಲ ಎಂದೂ ಈ ಜಮಾಅತಿನ ಹಾಗೆ ವಿವಿಧ ದೇಶಗಳಲ್ಲಿ ಅದು ಹರಡಿಲ್ಲ ಎಂದೂ ತಿಳಿಯಿತು. ನಾನು ಯಾವ ಪಂಗಡದೊಂದಿಗೆ ಸೇರಿರುವೆನೋ ಅದು ಸರಿಯಾದುದು ಎಂದು ನಾನು ಭಾವಿಸಿದ್ದೆ. ಆದರೆ ಜಲ್ಸಸಾಲಾನದ ಭಾಷಣಗಳಿಂದ ತಿಳಿದು ಬಂದುದೇನೆಂದರೆ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿವಸಲ್ಲಮರ ನಡೆವಳಿಕೆ ಪ್ರಕಾರ ಈ ಜಮಾಅತಿನವರು ವರ್ತಿಸುತ್ತಾರೆ. ನಾನು ಪ್ರಾರ್ಥಿಸುತ್ತಾ ಇದ್ದೆ. "ಓ ಅಲ್ಲಾಹ್ ನನ್ನನ್ನು ಉತ್ತಮ ಜನರೊಂದಿಗೆ ಸೇರಿಸು. ಸತ್ಯವಾದ ಖಿಲಾಫತ್ ಮೂಲಕ ನನಗೆ ಮಾರ್ಗದರ್ಶನ ನೀಡು. ನನ್ನ ಶಕ್ತಿ ಸಾಮರ್ಥ್ಯಗಳನ್ನು ಇಸ್ಲಾಮಿನ ತಬ್ಲೀಗ್‌ಗೆ ಬಳಸುವಂತೆ ಮಾಡು. ಆವಶ್ಯಕತೆ ಇರುವವರಿಗೆ ಸಹಾಯಕಳಾಗುವಂತೆ ಮಾಡು" ಎಂದು. ನನ್ನ ಪಾರ್ಥನೆ ಅಲ್ಲಾಹನು ಅಂಗೀಕರಿಸಿದನೆಂದು ನಾನು ಭಾವಿಸುತ್ತೇನೆ. ಅಹ್ಮದಿಯಾ ಜಮಾಅತಿನಲ್ಲಿ ಸೇರುವ ಭಾಗ್ಯವನ್ನು ಅಲ್ಲಾಹನು ನನಗೆ ದಯಪಾಲಿಸಿರುವನು.

ಬೆಲಿಝ್‌ನಿಂದ ಒಬ್ಬ ನವ ಅಹ್ಮದಿಯಾದ ಐವಾನ್ ವಾರ್ನ್ (ಅವರ ಈಗಿನ ಹೆಸರು ಹಮ್‌ಝ ರಶೀದ್) ಹೀಗೆ ಹೇಳುತ್ತಾರೆ: ಜಲ್ಸದ ಮೂರು ದಿನಗಳಲ್ಲಿ ನನಗೆ ಜಮಾಅತಿನ ವೈಶಾಲ್ಯತೆ ಬಗ್ಗೆ ತಿಳಿಯಿತು. ಈ ಜಲ್ಸದ ವ್ಯವಸ್ಥೆಯಲ್ಲಿ ಮಾಯಾಜಾಲದಂತಹ ಸ್ಥಿತಿ ಇದೆ. ಎಂಬತ್ತಕ್ಕಿಂತ ಹೆಚ್ಚು ದೇಶಗಳಿಂದ ಆಗಮಿಸಿದ ಜನರನ್ನು ನಾನು ಬೇಟಿಯಾದೆನು. ಅವರಲ್ಲಿ ಬಡವರೂ ಶ್ರೀಮಂತರೂ ರಾಜಕಾರಣಿಗಳೂ ಸರಕಾರಿ ಅಧಿಕಾರಿಗಳೂ ಇದ್ದರು. ಈ ಜಲ್ಸಕ್ಕೋಸ್ಕರ ಅಸಂಖ್ಯಾತ ಸ್ವಯಂಸೇವಕರು ಕೆಲಸಮಾಡಿದರು. ಅತಿಥಿ ಸತ್ಕಾರ ಬಹಳ ಉನ್ನತ ಮಟ್ಟದ್ದಾಗಿತ್ತು.

ಮಾರ್ಶಲ್ ಐಲೇಂಡ್ಸ್‌ನಿಂದ ಆಗಮಿಸಿದ **ಲಜ್ನ**ದ ಸದರ್ ಹೊಸ ಅಹ್ಮದಿಯಾಗಿದ್ದರು. ಮೇರಿ ರೀನ್‌ಥಾ ಜುವಾನಿ ಎಂಬ ಹೆಸರು ಹೊಂದಿದ ಅವರು ಹೇಳಿದರು: **ಅಲ್ ಹಮ್‌ದುಲಿಲ್ಲಾಹ್** ಜಲ್ಸಸಾಲಾನ ನನಗೆ ಲಭಿಸಿದ ಒಂದು ಬಹಳ ದೊಡ್ಡ ಅನುಗ್ರಹವಾಗಿದೆ. ನಾನು ಇಲ್ಲಿ ನೆರೆದಿರುವ ನನ್ನ ಸಹೋದರ ಸಹೋದರಿಯರಲ್ಲಿ ಪ್ರೀತಿ ಮತ್ತು ಅನ್ಯರ ನೋವಿನ ಬಗ್ಗೆ ಸಹಾನುಭೂತಿಯನ್ನು ಕಂಡೆನು. ನಾವು ಮೊದಲೇ ಪರಿಚಿತರು ಎಂಬಂತೆ ಅವರು ನನ್ನೊಂದಿಗೆ ಮಾತನಾಡಿದರು. ಜಮಾಅತಿನ ಧ್ಯೇಯವಾಕ್ಯದ ಅನುಸರಣೆ ನಾನು ಕಂಡೆನು. ಖಲೀಫರ ಭಾಷಣಗಳನ್ನು ಆಲಿಸಿದಾಗ ಅದ್ಭುತ ಭಾವನೆಗಳುಂಟಾಗುತ್ತಿತ್ತು. ನಾನು ಕಣ್ಣೀರು ಸುರಿಸುತ್ತಿದ್ದೆ. ನಾನು ನನ್ನ ಭಾವನೆಗಳನ್ನು ವಿವರಿಸಲಾರೆ. **"ಆಲಮೀ ಬೈಅತ್"** ದೃಶ್ಯ

ಸಹ ಮಾಂತ್ರಿಕ ಪರಿಣಾಮ ಉಂಟುಮಾಡುವುದಾಗಿತ್ತು. ಜಲ್ಸಕ್ಕೆ ಆಗಮಿಸಿದ ನಂತರ ನಾನು ಮೊದಲಿಗಿಂತಲೂ ಹೆಚ್ಚು ಅಲ್ಲಾಹನಿಗೆ ಸಮೀಪವಾಗಿರುವೆನು.

ಮೆಕ್ಸಿಕೋ ದೇಶದ ನವ ಅಹ್ಮದಿ ಬಶೀರ್ ಕೊಯಾಸು ಸಾಹಿಬ್ ಹೇಳುತ್ತಾರೆ: ವಿವಿಧ ದೇಶಗಳಿಂದ ಆಗಮಿಸಿದ ಜನರು ಖಲೀಫರ ಬಗ್ಗೆ ಅಪಾರ ಪ್ರೀತಿ ಹೊಂದಿದ್ದರು. ಜಲ್ಸದ ಕಾರ್ಯಕರ್ತರು ಅತಿಥಿ ಸತ್ಕಾರವನ್ನು ನಿಷ್ಠೆಯಿಂದ ಮಾಡುತ್ತಿದ್ದರು. ಅಹ್ಮದಿಯಾ ಜಮಾಅತ್ ನೈಜ ಇಸ್ಲಾಮಿನ ಚಿತ್ರವನ್ನು ಲೋಕಕ್ಕೆ ತೋರಿಸಿಕೊಡುವ ಒಂದು ಮಾದರಿ ಜಮಾಅತ್ ಆಗಿದೆ.

ಮೆಕ್ಸಿಕೋ ದೇಶದ ನವ ಅಹ್ಮದಿ ಇಮಾಮ್ ಇಬ್ರಾಹಿಮ್ ಚರ್ಚಿಲ್ ಸಾಹಿಬ್ ತನ್ನನ್ನು ಅನುಸರಿಸುತ್ತಿದ್ದ ಎಪ್ಪತ್ತು ಜನರೊಂದಿಗೆ ಅಹ್ಮದಿಯಾ ಜಮಾಅತಿಗೆ ಸೇರಿರುವರು. ಅವರು ಹೇಳುತ್ತಾರೆ: ಜಲ್ಸದ ಕಾಲದಲ್ಲಿ ಅಸಂಖ್ಯಾತ ಅನುಗ್ರಹಗಳು ಸುರಿಸಲ್ಪಡುತ್ತವೆ ಎಂದು ನಾನು ಭಾವಿಸುತ್ತೇನೆ. ಖಿಲಾಫತ್ತಿನ ನೆರಳಿನಲ್ಲಿ ಲೋಕದ ವಿವಿಧ ವರ್ಣ ಮತ್ತು ವರ್ಗದ ಜನರು ಪರಸ್ಪರ ಬ್ರಾತೃಭಾವದಿಂದಲೂ ಪ್ರೀತಿಯಿಂದಲೂ ತುಂಬಿದ್ದಾರೆ. ಖಲೀಫರ ಭಾಷಣದಿಂದ ನನ್ನ ಜ್ಞಾನ ವರ್ಧಿಸಿತಲ್ಲದೆ ನನ್ನ ಹೃದಯಕ್ಕೆ ಸಾಂತ್ವನ ಲಭಿಸಿತು. ಜಲ್ಸದಲ್ಲಿ ಭಾಗವಹಿಸಿದ ಪ್ರತಿಯೊಬ್ಬ ವ್ಯಕ್ತಿ ತನ್ನ ಸ್ಥಿತಿಯಿಂದ ಹೀಗೆ ಸಾಕ್ಷ್ಯ ನುಡಿಯುತ್ತಿದ್ದನು- ಇಸ್ಲಾಮ್ ಪ್ರೀತಿ ಮತ್ತು ಶಾಂತಿಯ ಸಂದೇಶವಾಗಿದೆ. ಪ್ರತಿಯೊಂದು ಜನಾಂಗ ಮತ್ತು ದೇಶಕ್ಕೆ ಅದರ ಆವಶ್ಯಕತೆ ಇದೆ.

ಫ್ರೆಂಚ್ ಗಿಯಾನದಿಂದ ಮಿಸ್ಟರ್ ಆಬಿದೂ ಆಗಮಿಸಿದ್ದರು. 2008ರಲ್ಲಿ ಅವರು ಬೈಅತ್ ಮಾಡಿದ್ದರು. ಜಲ್ಸಕ್ಕೆ ಅವರು ಪ್ರಥಮ ಬಾರಿ ಬಂದುದಾಗಿತ್ತು. ಅವರು ಹೇಳುತ್ತಾರೆ, ನಾನು ಮುಸ್ಲಿಮನಾಗಿ ಜನಿಸಿದವನಾಗಿರುವೆನು. ಫ್ರೆಂಚ್ ಗಿಯಾನದ ಪ್ರಥಮ ಅಹ್ಮದಿ ನಾನಾಗಿರುವೆನು. ಇಂದು ಜಲ್ಸದಲ್ಲಿ ಭಾಗವಹಿಸಿ ನೈಜ ಇಸ್ಲಾಮ್ ಏನೆಂದು ತಿಳಿಯಿತು. ಅಹ್ಮದಿಯತ್ ಮತ್ತು ಖಲೀಫರ ಮಹತ್ವ ಬಗ್ಗೆ ಈಗ ನನಗೆ ಅರಿವಾಗಿದೆ. ಹೇಗೆ ಜೀವಿಸಬೇಕೆಂದು ಖಲೀಫರು ಮಾರ್ಗದರ್ಶನ ನೀಡಿದರು. ಆ ಮಾರ್ಗದರ್ಶನ ಪ್ರಕಾರ ವರ್ತಿಸಿ ಅಲ್ಲಾಹನ ಸಂಪ್ರೀತಿ ಸಂಪಾದಿಸಬಹುದು.

ಮಾಲಿ ದೇಶದಿಂದ ಡಾಕ್ಟರ್ ಕಾಯಿತಾಮ್ ಸಾಹಿಬ್ ಆಗಮಿಸಿದ್ದರು. ಅವರು ಜಲ್ಸದಲ್ಲಿ ಬೈಅತ್ ಮಾಡಿದರು. ಅವರು ಹೇಳುತ್ತಾರೆ: ಜಲ್ಸದ ಸಮಯದಲ್ಲಿ ನನ್ನಲ್ಲಿ ಉಂಟಾದ ಭಾವನೆಗಳು ನನ್ನ ಜೀವಿತದಲ್ಲಿ ಮೊದಲ ಬಾರಿ ಉದ್ಭವಿಸಿದವು. ನಾನು ಜಲ್ಸಕ್ಕೆ ಪ್ರಥಮ ಸಾರಿ ಬಂದಿರುವೆನು. ಇನ್ನು ಮುಂದೆ ಯಾವಾಗಲೂ ಜಲ್ಸಕ್ಕೆ ಆಗಮಿಸುವೆನು. ಅಹ್ಮದಿಯಾ ಜಮಾಅತಿನ ವಿರೋಧಿಗಳು ಸಂಪೂರ್ಣವಾಗಿ ಪ್ರಯತ್ನಿಸಿದರೂ ಈ ಜಲ್ಸದ ಹತ್ತರಲ್ಲಿ ಒಂದು ಪಾಲಷ್ಟು ವ್ಯವಸ್ಥೆಯನ್ನು ಸಹ ಮಾಡಲು ಸಾಧ್ಯವಾಗದು. ಯುನೈಟೆಡ್ ನೇಶನ್ಸ್‌ನಂತಹ ಮಹಾಶಕ್ತಿಗಳು ಸಹ ಇಂತಹ ವ್ಯವಸ್ಥೆ ಮಾಡಲಾರವು. ಅಹ್ಮದಿಯಾ ಜಮಾಅತ್ ಒಂದು ವಾಸ್ತವಿಕ ಶಕ್ತಿಯಾಗಿದೆ. ಇದೇ ಕಾರಣದಿಂದ ನಾನು ಹೃತ್ಪೂರ್ವಕವಾಗಿ ಅಹ್ಮದಿಯಾ ಜಮಾಅತಿಗೆ ಸೇರಿದೆನು.

ಅಲ್ಲಾಹನ ಅನುಗ್ರಹದಿಂದ ಕೇಂದ್ರದ ಪ್ರೆಸ್‌ಗೆ ಸಂಬಂಧಿಸಿದ ಟೀಮ್ ಮತ್ತು ಯು.ಕೆ. ಜಮಾಅತಿನ ಪ್ರೆಸ್‌ಗೆ ಸಂಬಂಧಿಸಿದ ಟೀಮ್ ಬಹಳ ಉತ್ತಮ ಕೆಲಸ ಮಾಡಿವೆ. ಈ ವರ್ಷ ಜಲ್ಸದ ಕವರೇಜ್ ಬಹಳ ಉತ್ತಮ ರೀತಿಯಲ್ಲಿ ನಡೆದಿದೆ. ನೈಜ ಇಸ್ಲಾಮ್ ಮತ್ತು ಅಹ್ಮದಿಯ್ಯತ್ತಿನ ಸಂದೇಶ ಲೋಕಕ್ಕೆ ತಲಪಿಸಲಾಗಿದೆ. ಕೇಂದ್ರದ ಪ್ರೆಸ್ ಟೀಮ್ ಮಾಡಿದ ಪ್ರಯತ್ನದ ಕಾರಣದಿಂದ ವಿದೇಶದಿಂದಲೂ ಪ್ರೆಸ್ ಮತ್ತು ಮಾಧ್ಯಮಗಳ ಪ್ರತಿನಿಧಿಗಳು ಬಂದಿದ್ದರು. ಅವರು ಸಹ ಉತ್ತಮ ಅಭಿಪ್ರಾಯ ಸೂಚಿಸಿದರು. ಅವುಗಳ ಬಗ್ಗೆ ಪ್ರಸ್ತಾಪಿಸಲಾಗಿದೆ. ಪತ್ರಿಕೆಗಳ ಮೂಲಕ ಸುಮಾರು ಹದಿಮೂರು ಮಿಲಿಯ ಜನರಿಗೆ ಯು.ಕೆ.ಯಲ್ಲಿ ಸಂದೇಶ ತಲಪಿದೆ.

ಒಬ್ಬ ಅಹ್ಮದಿಯ ಜೊತೆ ಒಬ್ಬ ಪತ್ರಕರ್ತೆ ಮಹಿಳೆ ಬಂದಿದ್ದರು. ಆ ಅಹ್ಮದಿಯೊಂದಿಗೆ ಇನ್ನೊಬ್ಬ ಅಹ್ಮದಿ ಹೇಳಿದರು: "ಆ ಮಹಿಳೆಗೆ ತನ್ನ ತಲೆಗೂದಲನ್ನು ಮರೆಮಾಡಲು ಹೇಳಬೇಕು ನಮ್ಮ ಪರಿಸರದಲ್ಲಿ ಇದು ಆವಶ್ಯಕವಾಗಿದೆ" ಎಂದು. ಇಂತಹ ಪುರುಷರೊಂದಿಗೆ ನಾನು ಹೇಳಲು ಬಯಸುವುದೇನೆಂದರೆ ನೀವು ನಿಮ್ಮ ಮನೆಯನ್ನು ಮೊದಲು ಸುಧಾರಣೆ ಮಾಡಿರಿ. ಲೋಕವು ತಾನಾಗಿಯೇ ಸುಧಾರಿಸಲ್ಪಡುವುದು. ಇಂತಹ ವರ್ತನೆಗಳ ಕಾರಣದಿಂದಲೇ ಇಸ್ಲಾಂ ದ್ವೇಷ ಭಾವನೆಯಿಂದ ನೋಡಲ್ಪಡುತ್ತದೆ.

ಅಲ್ಲಾಹನ ಅನುಗ್ರಹದಿಂದ ಜಲ್ಸದ ಕಾರ್ಯಕ್ರಮಗಳನ್ನು ಲೋಕದ ಜನರಿಗೆ ತಲಪಿಸಲು ಎಂ.ಟಿ.ಎ. ಬಹಳ ದೊಡ್ಡ ಕೆಲಸ ಮಾಡುತ್ತದೆ. ಈ ವರ್ಷ ಸಹ ಅದು ಎಂದಿನಂತೆ ಬಹಳ ದೊಡ್ಡ ಕೆಲಸ ಮಾಡಿದೆ. ಅಹ್ಮದಿಯರು ಎಂ.ಟಿ.ಎ. ಪ್ರಸಾರದ ಬಗ್ಗೆ ಸಂತೋಷ ಮತ್ತು ಕೃತಜ್ಞತೆ ಹೊಂದಿದ ಹಾಗೆ ಅಹ್ಮದಿಯೇತರರು ಸಹ ಅದರ ಬಗ್ಗೆ ಒಳ್ಳೆಯ ಅಭಿಪ್ರಾಯ ಸೂಚಿಸಿರುವರು. ಅಹ್ಮದಿಯೇತರರಾದ ಅರಬಿಗಳು ಸಹ ಈ ಸಲ ಬಹಳ ಉತ್ತಮ ಅಭಿಪ್ರಾಯ ಸೂಚಿಸಿರುವರು. ನೈಜ ಇಸ್ಲಾಮ್ ಇದೇ ಆಗಿದೆ ಎಂದೂ ಲೋಕಕ್ಕೆ ಇದರ ಆವಶ್ಯಕತೆ ಇದೆ ಎಂದೂ ಅಹ್ಮದಿಯಾ ಜಮಾಅತ್ ಅದನ್ನು ಪ್ರಚಾರ ಮಾಡುತ್ತಿದೆ ಎಂದೂ ಅವರು ಹೇಳಿದರು. ಕೆಲವರು ಹೀಗೆ ಸಹ ಹೇಳಿದರು: ವಾಸ್ತವಿಕ ಖಿಲಾಫತ್ ವ್ಯವಸ್ಥೆ ಇದೇ ಆಗಿದೆ. ಲೋಕಕ್ಕೆ ಇದರ ಆವಶ್ಯಕತೆ ಇದೆ.

ಜಲ್ಸದ ಕಾರ್ಯಕ್ರಮಗಳನ್ನು ಕೆಲವು ಗಂಟೆಗಳ ಕಾಲ ಘಾನದ ನೇಶನಲ್ ಟಿ.ವಿ, ಸಿಯೆರ್ರಾಲಿಯೋನಿನ ನ್ಯಾಶನಲ್ ಟಿ.ವಿ. ಮತ್ತು ನೈಜಿರಿಯಾದ ಒಂದು ಖಾಸಗಿ ಟಿ.ವಿ. ಸಹ ಪ್ರದರ್ಶಿಸಿದುವು. ಮತ್ತು ಅವುಗಳಿಂದ ಉತ್ತಮ ಪರಿಣಾಮ ಉಂಟಾಯಿತು. ಅದರ ಕುರಿತು ಕೆಲವರು ತಮ್ಮ ಅಭಿಪ್ರಾಯ ಬರೆದಿರುವರು. ಘಾನ ದೇಶದ ಕುಮಾಸಿಯ ಒಬ್ಬರು ಹೀಗೆ ಬರೆದಿದ್ದಾರೆ: ನಾನು ಅಹ್ಮದಿಯಾ ಜಮಾಅತ್ ಬಗ್ಗೆ ಬಹಳ ಆಲಿಸಿದ್ದೆ. ಘಾನದ ಟಿ.ವಿ.ಯಿಂದ ನಿಮ್ಮ ಕಾರ್ಯಕ್ರಮಗಳನ್ನು ಕಂಡಾಗ ಬಹಳ ಆಶ್ಚರ್ಯವಾಯಿತು. ನಮ್ಮ ಸ್ಥಳೀಯ ಇಮಾಮ್ ಅಹ್ಮದಿಯಾ ಜಮಾಅತ್ ಬಗ್ಗೆ ಹೇಳಿದವು ಎಲ್ಲವೂ ಸುಳ್ಳೆಂದು ತಿಳಿಯಿತು. ಇಸ್ಲಾಮಿನ ಉಪದೇಶಗಳನ್ನು ಇಷ್ಟು ಸುಂದರವಾಗಿ ಪ್ರಚಾರಗೊಳಿಸುವುದನ್ನು ಮತ್ತು ಭೀಕರವಾದವನ್ನು ಖಂಡಿಸುವುದನ್ನು ನಾನು ಮೊದಲ ಬಾರಿ ಕಂಡೆನು.

ಒಬ್ಬ ಅಹ್ಮದಿ ತನ್ನ ಅಹ್ಮದಿಯಲ್ಲದ ಸಹೋದರಿ ಜೊತೆ ಘಾನ ಟಿ.ವಿ.ಯಲ್ಲಿ ಜಲ್ಸದ ಕಾರ್ಯಕ್ರಮ ನೋಡಿದಾಗ ಆ ಅಹ್ಮದಿಯೇತರಳಾದ ಸಹೋದರಿ ಅಹ್ಮದಿ ಆಗಲು ನಿರ್ಧರಿಸಿದಳು. ಒಬ್ಬ ಅಹ್ಮದಿ **"ಆಲಮೀ ಬೈಅತ್**

**ಪ್ರೋಗ್ರಾಮ್”** ನೋಡಿ ಹೇಳಿದರು. ನಾನು ಅಹ್ಮದಿ ಆದ ಬಗ್ಗೆ ನನಗೆ ಬಹಳ ಅಭಿಮಾನವಿದೆ. ನಾನು ನನ್ನ ಕೆಲವು ಕ್ರೈಸ್ತ ಸ್ನೇಹಿತರೊಂದಿಗೆ ಕಾರ್ಯಕ್ರಮ ನೋಡಿದಾಗ ಆ ಕ್ರೈಸ್ತ ಸ್ನೇಹಿತರು ಅಹ್ಮದಿಯಾ ಜಮಾಅತಿನ ಅಭಿವೃದ್ಧಿಯನ್ನು ಕಂಡು ಆಶ್ಚರ್ಯಚಕಿತರಾದರು.

ನಾನು ಹೇಳಿದ ವಿವರಣೆಗಳನ್ನು ಆಲಿಸಿದ ನಂತರ ಸಂತೋಷಗೊಂಡು ನಾವು ಬಹಳ ಜಯಗಳಿಸಿದೆವು ಎಂದು ಸುಮ್ಮನೆ ಕುಳಿತುಕೊಳ್ಳಬಾರದು. ಇವುಗಳಿಂದ ನಾವು ಇನ್ನಷ್ಟು ಪ್ರಗತಿ ಗಳಿಸಲು ಪ್ರಯತ್ನ ಮಾಡುವ ಉತ್ಸಾಹ ಉಂಟಾಗಬೇಕು. ಅಭಿವೃದ್ಧಿ ಹೊಂದುತ್ತಿರುವ ಸಮುದಾಯಗಳು ಉತ್ತಮ ಸ್ಥಿತಿಯಿಂದ ಇನ್ನಷ್ಟು ಉತ್ತಮ ಸ್ಥಿತಿಗೆ ತಲಪುವ ಮಾರ್ಗಗಳನ್ನು ಹುಡುಕುತ್ತಾ ಇರುತ್ತದೆ.

ನಮ್ಮಲ್ಲಿ ಕೆಲವು ಕುಂದು ಕೊರತೆಗಳು ಸಹ ಇವೆ. ಅವುಗಳ ಬಗ್ಗೆ ಸಹ ಗಮನ ಹರಿಸಬೇಕು. ಬಹಳ ದೊಡ್ಡ ಗಾತ್ರದ ವ್ಯವಸ್ಥೆ ಮಾಡುವಾಗ ಕುಂದು ಕೊರತೆಗಳು ತಲೆದೋರುವುದು ಸಹಜವೇ ಆದರೂ ಅವುಗಳನ್ನು ಸಹ ದೂರ ಸರಿಸಲು ಪ್ರಯತ್ನಿಸಬೇಕು. ಮಾಡಿದ ತಪ್ಪುಗಳನ್ನು ಗುರುತಿಸಿಕೊಂಡು ಮುಂದಿನ ವರ್ಷ ಅವುಗಳನ್ನು ಪುನರಾವರ್ತಿಸದಿರಲು ಜಲ್ಸದ ವ್ಯವಸ್ಥಾಪಕರು ಶ್ರದ್ಧೆವಹಿಸಬೇಕು. ಕುಂದುಕೊರತೆಗಳಿಗೆ ಕಾರಣ ಕೇವಲ ಕಾರ್ಯಕರ್ತರಲ್ಲ. ಜಲ್ಸದಲ್ಲಿ ಬಂದು ಸೇರುವ ಜನರಲ್ಲಿ ಸಹ ಕೆಲವರು ಹಟಮಾರಿಗಳಿರುತ್ತಾರೆ. ಅವರ ಕಾರಣದಿಂದ ಕೆಲವು ಅವ್ಯವಸ್ಥೆಗಳು ಉಂಟಾಗುತ್ತವೆ. ಇಂತಹ ಜನರನ್ನು ಸುಧಾರಣೆ ಮಾಡಲು ಪ್ರಯತ್ನಿಸಬೇಕಾಗಿದೆ.

ಮಹಿಳೆಯರ ಮುಖ್ಯ ಡೇರೆಯಲ್ಲಿ ಒಬ್ಬ ಮಹಿಳೆ ಒಂದು ಮಗುವಿನೊಂದಿಗೆ ಕುಳಿತಿದ್ದರು. ಆಗ ನಮ್ಮ ಕಾರ್ಯಕರ್ತೆ ಹೇಳಿದಳು: ಇಲ್ಲಿ ಮಕ್ಕಳನ್ನು ಕುಳ್ಳಿರಿಸಬಾರದು. ಆಗ ಆ ಮಹಿಳೆ ಅಲ್ಲಿಂದ ಎದ್ದು ಹೋಗುವುದಾಗಿ ಹೇಳಿದರು. ಅನಂತರ ಕಾರ್ಯಕರ್ತೆಗೆ ತಿಳಿಯಿತು ಆ ಮಹಿಳೆ ಅಹ್ಮದಿಯಲ್ಲವೆಂದು. ಆಗ ಆ ಕಾರ್ಯಕರ್ತೆ ಆ ಮಹಿಳೆಯೊಂದಿಗೆ ಹೇಳಿದಳು: ನಿಮ್ಮ ಮಗು ಮೌನವಾಗಿರುವುದಾದರೆ ನೀವು ಇಲ್ಲಿ ಕುಳಿತುಕೊಳ್ಳಬಹುದು. ಆಗ ಸಮೀಪ ಕುಳಿತ ಅಹ್ಮದಿ ಮಹಿಳೆ ಕಾರ್ಯಕರ್ತೆಯೊಂದಿಗೆ ಜಗಳ ಪ್ರಾರಂಭಿಸಿದಳು. “ನಮಗೆ ಕಷ್ಟವಾಗುವುದಿಲ್ಲವಾದರೆ ನಿಮಗೇನು ಕಷ್ಟವಿದೆ?” ಎಂದೆಲ್ಲಾ ಹೇಳಲು ತೊಡಗಿದರು. ಆ ಕಾರ್ಯಕರ್ತೆ ಬುದ್ಧಿ ಉಪಯೋಗಿಸಿದಳು ಮತ್ತು ಜಗಳಕ್ಕೆ ಮುಂದಾಗಲಿಲ್ಲ. ಅಲ್ಲಿಂದ ಮೌನವಾಗಿ ಹೊರಟು ಹೋದಳು. ಆ ಅಹ್ಮದಿ ಮಹಿಳೆ ಮತ್ತೂ ಹೇಳತೊಡಗಿದಳು– ಏನು ಇಲ್ಲಿ ಕುಳಿತುಕೊಳ್ಳಬಾರದೆಂದು ಹದೀಸು ಇದೆಯೇ ಎಂದು. ಇಂತಹ ಹಟದಿಂದ ವರ್ತಿಸುವ ಮಹಿಳೆಯರಿಂದಲೂ ಪುರುಷರಿಂದಲೂ ಜಗಳ ಪ್ರಾರಂಭವಾಗುತ್ತದೆ. ಇದರ ಸುಧಾರಣೆ ಆಗಬೇಕಾದ ಅಗತ್ಯವಿದೆ. ಈ ಘಟನೆಯನ್ನು ಯಾರೂ ಲಕ್ಷಿಸದೆ ಇದ್ದುದು ಉತ್ತಮವಾಯಿತು.

ಹದೀಸಿನ ಬಗ್ಗೆ ಹೇಳುವುದಾದರೆ, ಇದು ಹದೀಸಿನಲ್ಲೂ ಇದೆ, ಖುರ್ಆನಿನಲ್ಲೂ ಇದೆ. ಅಧಿಕಾರ ಹೊಂದಿದ ಯಾರು ಆದೇಶಿಸಿದರೂ ಅದನ್ನು ಪಾಲಿಸಬೇಕೆಂಬ ನಿರ್ದೇಶವಿದೆ. ಅಮೀರರನ್ನು ಅನುಸರಿಸಬೇಕೆಂದು ಆಜ್ಞಾಪಿಸಲಾಗಿದೆ. ನಿಮ್ಮ ಅಮೀರ್ ಬಹಳ ಚಿಕ್ಕ ಗಾತ್ರದ ತಲೆ ಹೊಂದಿದವರಾಗಿದ್ದರೂ ಅವರನ್ನು ಅನುಸರಿಸಬೇಕೆಂದು ಹದೀಸಿನಲ್ಲಿ ಹೇಳಲಾಗಿದೆ.

ಆದುದರಿಂದ ಚಿಕ್ಕ ವಿಷಯಗಳ ಬಗ್ಗೆ ಇಂತಹ ಅತಿರೇಕದ ವರ್ತನೆ ಪ್ರಕಟಿಸಬಾರದು. ಹದೀಸು ಹೇಳುವುದು ಅಧಿಕಾರಿಗಳನ್ನು ಅನುಸರಿಸಬೇಕು ಎಂದಾಗಿದೆ. ಅಹ್ಮದಿ ಎಂದು ಹೇಳಿಕೊಳ್ಳುವವನು ಆಜ್ಞೆಗಳನ್ನು ಪಾಲಿಸಬೇಕಾದುದು ಆವಶ್ಯಕವಾಗಿದೆ. ಎಲ್ಲಾ ಕಾರ್ಯಕರ್ತರಿಗೂ ಕಾರ್ಯಕರ್ತೆಯರಿಗೂ ನಾನು ನೀಡುವ ಆದೇಶವೇನೆಂದರೆ ಇನ್ನು ಮುಂದೆ ಯಾರಾದರೂ ಇಂತಹ ವರ್ತನೆ ತೋರಿಸುವುದಾದರೆ ಅದರ ಬಗ್ಗೆ ತಮ್ಮ ಮೇಲಧಿಕಾರಿಗಳಿಗೆ ತಿಳಿಸಬೇಕು. ಅಂತಹ ವ್ಯಕ್ತಿಯ ಪರಿಚಯ ಪತ್ರ ರದ್ದುಗೊಳಿಸಬೇಕು ಮತ್ತು ಜಲ್ಸದಲ್ಲಿ ಭಾಗವಹಿಸುವ ಅನುಮತಿ ನೀಡಬಾರದು. ಅಹ್ಮದಿಯಾ ಜಮಾಅತ್‌ಗೆ ಇಂತಹ ವಿದ್ರೋಹ ಮನೋಭಾವದ ಜನರ ಆವಶ್ಯಕತೆ ಇಲ್ಲ.

ಅಲ್ಲಾಹನ ಅನುಗ್ರಹದಿಂದ ಜಲ್ಸ ಒಟ್ಟಾರೆಯಾಗಿ ಉತ್ತಮ ರೀತಿಯಲ್ಲಿ ಜರಗಿತು. ಅತಿಥಿಗಳು ಉತ್ತಮ ರೀತಿ ಪ್ರಭಾವಿತರಾದರು. ಭಾಷಣಕಾರರ ಭಾಷಣಗಳು ಉತ್ತಮವಾಗಿದ್ದುವು ಎಂದು ನಾನು ಹೇಳಿರುವೆನು. ಅಲ್ಲಾಹನು ಈ ಉತ್ತಮ ಪರಿಣಾಮಗಳನ್ನು ಯಾವಾಗಲೂ ಸ್ಥಾಪಿಸಿಡಲಿ ಮತ್ತು ತಮ್ಮ ಜೀವಿತದ ಭಾಗವನ್ನಾಗಿ ಮಾಡಲು ಅಹ್ಮದಿಯರಿಗೆ ಭಾಗ್ಯ ನೀಡಲಿ. ಅತಿಥಿಗಳು ಕೃತಜ್ಞತೆ ಸೂಚಿಸಿದ ಹಾಗೆ ನಾನು ಸಹ ಎಲ್ಲಾ ಕಾರ್ಯಕರ್ತರಿಗೂ ಕಾರ್ಯಕರ್ತೆಯರಿಗೂ ಕೃತಜ್ಞತೆ ಅರ್ಪಿಸುತ್ತೇನೆ. ಅಲ್ಲಾಹನು ಅವರ ಸೇವೆಯನ್ನು ಅಂಗೀಕರಿಸಿ ಉತ್ತಮ ಪ್ರತಿಫಲ ನೀಡಲಿ. ಮುಂದೆ ಹೆಚ್ಚಿನ ಮಟ್ಟದ ಸೇವೆ ಸಲ್ಲಿಸುವ ಭಾಗ್ಯ ಅವರಿಗೆ ದೊರಕಲಿ. ಅವರು ಬಾಹ್ಯವಾಗಿ ಮಾತ್ರ ಸೇವೆ ಮಾಡುವವರಾಗದೆ ಇಸ್ಲಾಮೀ ತತ್ವಗಳ ವಾಸ್ತವಿಕ ಆತ್ಮ ಅವರಲ್ಲಿ ಉಂಟಾಗಲಿ. ಜಲ್ಸದಲ್ಲಿ ಭಾಗವಹಿಸುವವರನ್ನೂ ಸೇವೆ ಸಲ್ಲಿಸುವವರನ್ನೂ ಅಲ್ಲಾಹನು ನೈಜ ಅಹ್ಮದಿಗಳನ್ನಾಗಿ ಮಾಡಲಿ– ಆಮೀನ್.

––––––––––––––––*****––––––––––––––

*Friday Sermon delivered by Hadrath Khaleefatul Masih Al Khamis*[(atba)]

*at Masjid Baithul Futhuh, London on 05-09-2014.*

Summarized by *Nazarath Nashr-O-Isha'ath, Qadian*

***Kannada Translation:*** M. Ubeidullah for Kannada Desk, Qadian

***Reviewed by:*** M P Ibrahim | ***Typing:*** U Basheer Ahmad

*Published By:* **Kannada Isha'at Team,** *Ahmadiyya Muslim Jama`at, Karnataka*

*Email*: **khutuba.kannada@gmail.com**